# ನಾಟಕ 'ಕಪಿಲ' - ಸಾಮಾಜಿಕ ಮುಖಾಮುಖಿಯ ಚಿತ್ರಣ

('Kapila'- A Portrait of Social Interface)

**Dr. Sarvesha Bantahalli**
HOD, Dept. of Kannada
Email: sarvesh.bs@kristujayanti.com

ಸಿ. ವೀರಣ್ಣನವರು ಇಪ್ಪತ್ತನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಸಾಮಾಜಿಕ ರಚನೆಯ ಸೂಕ್ಷ್ಮತೆಯನ್ನು ಸಮಗ್ರವಾಗಿ ಅಧ್ಯಯನಮಾಡಿ ರಚಿಸಿದ ನಾಟಕ 'ಕಪಿಲ'. ಜಾತಿ ಲೆಕ್ಕಾಚಾರಗಳು, ಅಸ್ಪೃಷ್ಯತೆಯ ಆಚರಣೆ, ಜೀತ ಪದ್ಧತಿಯ ವಿಕೃತ ಮುಖ, ಅಧಿಕಾರಶಾಹಿಗಳ ದಬ್ಬಾಳಿಕೆ ಹೀಗೆ ಹತ್ತು ಹಲವು ಆಯಾಮಗಳಲ್ಲಿ ನಾಟಕ ರೂಪ ಪಡೆದುಕೊಂಡಿದೆ. ನಾಟಕದ ಸೂಕ್ಷ್ಮತೆಗಳನ್ನು ಗ್ರಹಿಸುತ್ತಾ ಹೋದರೆ ಇಂದಿನ ಸಮಾಜಕ್ಕೆ ಹೇಗೆ ಈ ನಾಟಕ ಅಂತರ್–ಸಂಬಂಧವನ್ನು ಕಲ್ಪಿಸುತ್ತಿದೆ ಎಂಬುದನ್ನು ಅತ್ಯಂತ ಕುತೂಹಲದಿಂದ ನೊಡುವಂತಾಗುತ್ತದೆ. ಕಾಲ ಬದಲಾದರು ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯ ಜಾಡ್ಯವನ್ನು ಹಾಗೆಯೇ ಉಳಿಸಿಕೊಂಡಿರುವ ರೀತಿಯನ್ನು ನೋಡಿದರೆ ಅತ್ಯಂತ ಬೇಸರ ಮೂಡುತ್ತದೆ. ಹೀಗಿದ್ದರೂ ಇಂತಹ ಸೃಜನಶೀಲ ಸಾಹಿತ್ಯದ ಹಿನ್ನೆಲೆಯಲ್ಲಿ ಸಮಾಜವನ್ನು ನೋಡುವ, ಅದರೊಂದಿಗೆ ಹೊಸ ಆಯಾಮಗಳನ್ನು ಹುಡುಕಿಕೊಳ್ಳುವ ಅಗತ್ಯತೆ ಇದ್ದೇ ಇದೆ. ಈ ನಾಟಕದ ರಚನಾಕಾರರಾದ ಸಿ. ವೀರಣ್ಣ ಅವರು ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು.  ಬೆಂಗಳೂರಿನಂತಹ ನಗರ ಜೀವನದ ರುಚಿಯನ್ನು ಕಂಡಿದ್ದ ವೀರಣ್ಣನವರು ಹಳ್ಳಿ ಭಾರತದ ಮುಖವನ್ನು ಮರೆತಿರಲಿಲ್ಲ. ಸದಾ ಆ ಮುಖ ಅವರನ್ನು ಅಷ್ಟಾಗಿ ಕಾಡಿದ್ದರ ಫಲವೇ ಈ ನಾಟಕ ಹಾಗೂ ಇಲ್ಲಿನ ಪಾತ್ರಗಳ ಸ್ವಾಭಾವಿಕ ನಡುವಳಿಕೆ.

ಸಿ. ವೀರಣ್ಣನವರು ಕೌಂಟುಂಬಿಕ ಜವಾಬ್ದಾರಿಗಳಿಗೆ ಒಳಗಾಗಿ ಅರ್ಧದಲ್ಲಿಯೇ ಶಾಲೆ ಬಿಡುವವರಿದ್ದರು. ತಂದೆ ನಡೆಸುತ್ತಿದ್ದ ಅಂಗಡಿ ವ್ಯಾಪಾರವನ್ನು ನಿರ್ವಹಿಸಲು ಬೇಕಾಗುವಷ್ಟು, ಅಂದರೆ ಕೂಡುವ ಹಾಗೂ ಕಳೆಯುವ ಲೆಕ್ಕ ಬಂದರೆ ಸಾಕು ಎನ್ನಿಸುವಷ್ಟರ ಮಟ್ಟಿಗೆ ತಂದೆ ಯೋಚಿಸುತ್ತಿದ್ದರು. ಸ್ನೇಹಿತರ ಸಹಕಾರದಲ್ಲಿ ಶಾಲೆಯ ಶಿಕ್ಷಣವನ್ನು ಮುಗಿಸುತ್ತಾರೆ. ಉನ್ನತ ವ್ಯಾಸಾಂಗದ ಹಂತಕ್ಕೆ ತಂದೆ ತೀರಿಕೊಳ್ಳುತ್ತಾರೆ. ಆನಂತರದಲ್ಲಿ ಪರೀಕ್ಷೆಯ ಸಮಯಕ್ಕೆ ಹಳ್ಳಿಯಿಂದ ಪಟ್ಟಣಕ್ಕೆ ಬಂದು ನಿಂತಹೋಗಿದ್ದ ಶಿಕ್ಷಣವನ್ನು ಅವರೇ ಹೇಳುವ ಹಾಗೆ ದಿನದಲ್ಲಿ ಸರಿಸುಮಾರು ಇಪ್ಪತ್ತು ಗಂಟೆಗಳಷ್ಟು ಓದಿ ಗೋಲ್ಡ್ ಮೆಡಲನ್ನು ಸಾಧಿಸುತ್ತಾರೆ. ಉನ್ನತ ವ್ಯಾಸಾಂಗದ ಹಂತಕ್ಕೆ ಶಿಕ್ಷಣವನ್ನು ಮುಂದುವರೆಸುವುದೋ ಬೇಡವೋ ಎಂಬ ಗೊಂದಲದಲ್ಲಿ ಇರುವಾಗ ಅವರ ಪದವಿ ಸ್ನೇಹಿತರಾಗಿದ್ದ ಪ್ರೊ. ಚಿ.

ಶ್ರೀನಿವಾಸರಾಜು ಅವರು ತುಂಬಬೇಕಿದ್ದ ಹಣವನ್ನು ತುಂಬಿ ಅವರ ವ್ಯಾಸಾಂಗಕ್ಕೆ ಸಹಕಾರಿಯಾಗುತ್ತಾರೆ. ಆನಂತರ ಶಿಕ್ಷಣವನ್ನು ಮುಗಿಸಿ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗುವವರೆಗು ಸೇವೆಸಲ್ಲಿಸಿ ನಿವೃತ್ತಿಯನ್ನು ಹೊಂದುತ್ತಾರೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷವೆನಿಸುವ ಕೆಲಸಗಳನ್ನು ಮಾಡಿದ್ದಾರೆ. ನಾಟಕಗಳ ರಚನೆ ಜೊತೆಗೆ ಅಭಿನಯವು ಅವರಿಗೆ ಪ್ರಿಯವಾದ ಕ್ಷೇತ್ರವಾಗಿತ್ತು. ಬಹಳವಾಗಿ ಕಾಡುವ ವಸ್ತುಗಳನ್ನು ನಾಟಕಗಳನ್ನಾಗಿಸಿದ್ದು ಇದೆ. ಅದರ ಜೊತೆಗೆ 'ಕನ್ನಡ ಪ್ರತಿಭಟನ ಕಾವ್ಯ'ವನ್ನು ಸಂಪಾದಿಸುತ್ತಾರೆ. ಜೊತೆಗೆ ನವಕರ್ನಾಟಕಕ್ಕೆ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ಸಂಪಾದಿಸಿಕೊಡುತ್ತಾರೆ. ಇದು ಕೆಲವು ಸಂಪುಟಗಳಾಗಿ ಪ್ರಕಟವಾಗುತ್ತದೆ. ಮೊದಲು 'ತಾಯಿ' ನಾಟಕವನ್ನು ಅನುವಾದ ಮಾಡುತ್ತಾರೆ. ಮಹಾಭಾರತ ಮಂಥನ, ಕನ್ನಡ ಕಾವ್ಯ ಖಂಡ, ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕತೆಗಳು, ವೇಮನ ವಾಣಿ, ದಳವಾಯಿ ಎಚ್ಚಮ ನಾಯಕ, ಸಾವಿರದವಳು, ಕಪಿಲ, ನಿರಂತರ ಭಾರತ, ಕನ್ನಡ ಕಾವ್ಯ ಕಂಡ ಹೆಣ್ಣು, ನಿರಂಜನರ ಮೃತ್ಯುಂಜಯ ಕಾದಂಬರಿಯನ್ನ ನಾಟಕ ರೂಪಕ್ಕೆ ತರುತ್ತಾರೆ. 'ಪರ್ಯಾಯ ಸಂಸ್ಕೃತಿ–ವಚನ ಸಂಪುಟ' ಇವರ ವಚನಕಾರರ ಕುರಿತಾದ ಮಹತ್ವದ ಕೃತಿ. ಹೀಗಿ ಜೀವನದುದ್ದಕ್ಕೂ ಸಾಹಿತ್ಯದ ಸೇವೆಯಲ್ಲಿಯೇ ತಮ್ಮನ್ನು ತೊಡಗಿಸಿಕೊಂಡವರು ಮೊ. ಸಿ. ವಿರಣ್ಣನವರು.

**ತಳ ಸಮುದಾಯಗಳ ಸ್ಥಿತ್ಯಂತರ**

ಮನುಷ್ಯ ಕಾಡಿನ ಬದುಕನ್ನು ನಾಡಿನ ಬದುಕನ್ನಾಗಿಸಿಕೊಳ್ಳುತ್ತಾ ಬೆಳೆದಂತೆ ಅವನ ನಡವಳಿಕೆ ಆಚಾರ–ವಿಚಾರಗಳಲ್ಲಿ ಒಂದು ರೀತಿಯ ಅನಗತ್ಯ ಎಲ್ಲೆಗಳು ರೂಪುಗೊಳ್ಳುತ್ತಾ ಹೋದವು. ತಾನೇ ತಾನಾಗಿ ಸಮಾಜವನ್ನ ಅನುಕೂಲಕ್ಕೆ ತಕ್ಕಂತೆ ಕಟ್ಟತೊಡಗಿದ. ಜೊತೆಗೆ ಬದುಕುವ ಜನರನ್ನ ಅವರ ವೃತ್ತಿಯ ಆಧಾರವಾಗಿಯೋ ಅಥವಾ ಆಹಾರ ಪದ್ಧತಿಗಳ ಆಧಾರವಾಗಿಯೋ ಹೊಸದಾಗಿ ನೋಡತೊಡಗಿದೆ. ಇದರ ಪರಿಣಾಮದಿಂದಾಗಿ ಸಮಾಜ ಹೊಡೆದು ಹೋಯಿತು. ಮೇಲು ಕೀಳೆಂಬ ಭಾವಗಳು ಹೇರಳವಾಗಿ ನಮ್ಮ ನಡುವೆ ವ್ಯಘ್ರ ರೂಪವನ್ನು ಪಡೆದುಕೊಂಡವು. ಗುರುತಿಗೆ ಹಂಚಿಕೊಂಡಿದ್ದ ಜಾತಿ ಸಮಾಜವನ್ನು ವಿಂಗಡಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿತು. ಸಾವಿರಾರು ವರ್ಷಗಳ ಈ ಬದುಕಿನ ಪಯಣದಲ್ಲಿ ಈ ಅವ್ಯವಸ್ಥೆಯಿಂದ ನೊಂದವರೆಷ್ಟೋ, ಬೆಂದು ಬಸವಳಿದವರೆಷ್ಟೋ!! ಇಪ್ಪತ್ತನೇ ಶತಮಾನದಲ್ಲಿಯೂ ಈ ಸಾಮಾಜಿಕ ಅಸ್ಥವ್ಯಸ್ಥ ಜೀವನ ವಿಧಾನವು ನಮಗೆ ಮಾರಕವಾಗಿ ಪರಿಣಮಿಸಿ ನಮ್ಮೊಳಗೆ ನಮ್ಮನ್ನು ಅಪರಿಚಿತರನ್ನಾಗಿಸಿ ಜೊತೆಗೆ ನಮ್ಮವರನ್ನೆ ವಿವಿಧ ಕನ್ನಡಿಗಳ ಮುಖೇನ ನೋಡುವಂತಹ ಸ್ಥಿತಿಯಲ್ಲಿ ಇದ್ದೇವೆ. ಇದು ಇಪ್ಪತ್ತೊಂದನೆ ಶತಮಾನಕ್ಕೂ ಹೊರತಾಗಿಲ್ಲವೆಂಬುದು ಹೊಸ ಶತಮಾನದ ಆದಿಯ ಇಪ್ಪತ್ತು ವರ್ಷಗಳು ತಿಳಿಸಿಕೊಟ್ಟಿವೆ.

‘ಕಪಿಲ’ ನಾಟಕವು ಈ ಅವ್ಯವಸ್ಥೆಯನ್ನು ಅತ್ಯಂತ ಸೂಕ್ಷ್ಮವಾಗಿ ಓದುಗರಿಗೆ ಪರಿಚಯಿಸುತ್ತದೆ. ಕೆಲವು ಜನಾಂಗಗಳು ಮೈತುಂಬಾ ಬಟ್ಟೆ ಧರಿಸುವುದಕ್ಕೂ ಅಡ್ಡಿಯಾಗುವಂತೆ ನಾವು ನಮ್ಮ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದೇವೆ. ಜಾತಿಯಿಂದ ಕೆಳ ಸ್ಥರದಲ್ಲಿ ಬದುಕುತ್ತಿದ್ದ ‘ಲಚ್ಚಿ’ ತನಗರಿವಿಲ್ಲದೇ ಮೇಲ್ವರ್ಗದ ಶೋಷಣೆಗೆ ಅನಾಯಾಸವಾಗಿ ಒಳಗಾಗುತ್ತಾಳೆ. ತನಗೆ ತಿಳಿದಿದ್ದರೂ ತಾನು ಯಾರ ಮನೆಯ ದಾಸಿಯಾಗಿರುತ್ತಾಳೊ ಆ ಒಡೆಯನ ಲೈಂಗಿಕ ಹಾಗೂ ದೈಹಿಕ ಶೋಷಣೆಗೆ ಒಳಗಾಗುತ್ತಾಳೆ. ಹಾಗಿದ್ದರೂ ತನಗೆ ತೊಂದರೆಯಾದವನನ್ನ ಕಿಂಚಿತ್ತೂ ದೂರದೆ, ಜರಿಯದೇ ಪೂಜನೀಯ ಭಾವನೆಯನ್ನು ತೋರುತ್ತಾಳೆ. ಓದುವ ಯಾರಿಗೂ ಒಪ್ಪಿಗೆಯಾಗುವ ರೀತಿಯಲ್ಲದೇ ಹೋದರೂ ಸಮಾಜದ ವಾಸ್ತವ ನೋಟಕ್ಕೆ ಇದು ಅತ್ಯಂತ ಹತ್ತಿರವಾದ ವಿಚಾರವಾಗಿದೆ.

ಅಪ್ಪ ಯಾರೆಂಬುದೇ ತಿಳಿಯದೆ ಜನಿಸಿದ ಮಗು ಮಗುವಾಗೇ ಇದ್ದರೆ ತೊಂದರೆಯೇನು ಇಲ್ಲ ಆದರೆ ಅಂತಹ ಮಗು ಬೆಳೆದು ದೊಡ್ಡವನಾದ ಮೇಲೆ ಅವನನ್ನು ಕಾಡುವ ಪ್ರಶ್ನೆಗಳು ಹಾಗೂ ಸಮಾಜ ಅವನನ್ನು ನಡೆಸಿಕೊಳ್ಳುವ ರೀತಿಯನ್ನು ಎದುರಿಸಿದಾಗ ಅವನು ಎಷ್ಟು ಅನ್ಯ ಮನಸ್ಕನಾಗಬಹುದು ಎಂಬುದು ತಿಳಿಯುತ್ತದೆ. ಅಂತಹ ವಾತಾವರಣದಲ್ಲಿ ಬೆಳೆದ ಹುಡುಗನ ಬದುಕು ಹೇಗೆಲ್ಲಾ ದಾರಿ ತಪ್ಪಬಹುದೆಂಬುದನ್ನು ಊಹಿಸಬಹುದಾಗಿರುತ್ತದೆ. ಆದರೆ ನಾಟಕದ ಪ್ರಧಾನ ಪಾತ್ರವಾಗಿರುವ ‘ಕಪಿಲ’ ಈ ಹಿನ್ನೆಲೆಯಲ್ಲಿ ತನ್ನ ತಾಯಿಯನ್ನು ಮುಗ್ಧವಾಗಿ ಕೇಳುವ ಪ್ರಶ್ನೆಗಳು ನಮ್ಮ ಸಮಾಜ ಎಷ್ಟು ಘಾತುಕವಾಗಿತ್ತೆಂಬುದನ್ನು ತಿಳಿಸುತ್ತವೆ. ಹದಿನೆಂಟರ ಹರೆಯಕ್ಕೆ ಬೆಳೆದ ಕಪಿಲ ಎಲ್ಲವನ್ನು ಅರ್ಥಮಾಡಿಕೊಳ್ಳುವ ಹಂತಕ್ಕೆ ಬೆಳೆದಾಗ ಅವನಲ್ಲಿ ಮೂಡುವ ಪ್ರಶ್ನೆಗಳು, ಅವುಗಳನ್ನು ತನ್ನ ತಾಯಿಗೆ ಅವನು ಕೇಳುವ ರೀತಿ ಓದುಗರಿಗೆ ಹತ್ತಿರವಾಗಿಬಿಡುತ್ತವೆ. ಅವನಿಗೆ ಅರ್ಥವಾಗುವಂತಿದ್ದರೂ ಅರ್ಥವಾಗದ ವಿಚಾರಗಳನ್ನು ಸ್ವತಃ ತನ್ನ ತಾಯಿಯಿಂದ ಕೇಳುತ್ತಿದ್ದರೂ ತಾಯಿಯೆಡೆಗಿನ ಪ್ರೀತಿಯಲ್ಲಿ ಯಾವ ಸಣ್ಣ ಬದಲಾವಣೆಯನ್ನು ತೋರದೆ ಮಾತನಾಡುವ ರೀತಿ ಆಪ್ತವಾಗುತ್ತದೆ. (ಗಂಡನನ್ನು ಕಳೆದುಕೊಂಡ ಹೆತ್ತ ತಾಯಿಯನ್ನು ತಾತನ ಜೊತೆಗೂಡಿ ಇತ್ತೀಚೆಗಷ್ಟೆ ಕೊಂದ ಮಗನ ಕಥೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸುದ್ಧಿ ಮಾಧ್ಯಮಗಳಲ್ಲಿ ನೋಡಿದ್ದೇವೆ) ವಿದ್ಯೆ ಹಾಗೂ ವಿವೇಕಗಳ ಅಗತ್ಯತೆಯನ್ನು ಈ ಸನ್ನಿವೇಶಗಳು ಪರಿಚಯಿಸುತ್ತವೆ.

ಬದಲಾಗುತ್ತಿರುವ ಕಾಲಕ್ಕೆ ತಮ್ಮ ಬದುಕನ್ನು ಬದಲಾಯಿಸಿಕೊಂಡು ಹೊಸ ಹಾದಿಯಲ್ಲಿ ಸಾಗುತ್ತಿರುವ ತಳ ಸಮುದಾಯಗಳನ್ನು ನಾವು ದೇಶದಾದ್ಯಂತ ನೋಡಬಹುದು. ಅದಕ್ಕೆ ಕಾರಣ ಗ್ರಹಿಕೆ. ಗ್ರಹಿಕೆಗೆ ಕಾರಣ ‘ಶಿಕ್ಷಣ’. ಅಂಬೇಡ್ಕರರು ತಳ ಸಮುದಾಯಗಳ ಏಳಿಗೆಗೆ ಹಾಗೂ ಅವರ ಸ್ವಾಭಿಮಾನದ ಬದುಕಿಗೆ ನಡೆಸಿದ ಹೋರಾಟದ ಫಲವಾಗಿ ಇಂದು ತಳ

ಸಮುದಾಯಗಳೂ ಸ್ವಾಭಿಮಾನದಿಂದ ಬದುಕುವಂತಾಗುತ್ತಿದೆ. ಮಲಹೊರುವ ಪದ್ಧತಿ, ಜೀತ ಪದ್ಧತಿ, ದೇವದಾಸಿ ಪದ್ಧತಿ ಹೀಗೆ ಹಲವು ಹೆಸರುಗಳಲ್ಲಿ ನಡೆಯುತ್ತಿದ್ದ ಸಮಾಜಿಕ ಶೋಷಣೆ ಇಂದು ಸ್ಥಿತ್ಯಂತರಗೊಂಡಿವೆ. ಪೂರ್ಣ ಪ್ರಮಾಣದಲ್ಲಿ ಇಲ್ಲವಾಗಿದೆಯೇ ಎಂಬ ಪ್ರಶ್ನೆ ಕಾಡುವುದು ನಿಜವಾದರೂ ಬದಲಾವಣೆ ತೀವ್ರ ಪ್ರಮಾಣದಲ್ಲಿ ನಡೆದಿದೆ ಎಂಬುದು ವಾಸ್ತವ ಸಂಗತಿ.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಗಡಿ ಭಾಗದ ಕೆಲವು ಗ್ರಾಮಗಳಲ್ಲಿ ಜನರು ದೇಹವನ್ನು ಮಾರಿಕೊಂಡೇ ಬದುಕು ನಡೆಸುತ್ತಿದ್ದರು. ಇಂದಿಗೆ ಆ ಸ್ಥಿತಿಯನ್ನು ಯೋಚಿಸುವುದಾದರೆ ಆ ಕುಟುಂಬಗಳಿಗೆ ಬೇರೆ ಬದುಕುವ ಮಾರ್ಗಗಳ ಪರಿಚಯವಾಗಲಿ ಇರಲಿಲ್ಲ. ಆದರೆ ಇಂದು ಅದೇ ಗ್ರಾಮಗಳು ವಿದ್ಯಾವಂತ ಸಮುದಾಯಗಳಾಗಿವೆ. ಹಲವು ಯುವಕ ಯುವತಿಯರು ಸರ್ಕಾರಿ ನೌಕರಿಯನ್ನು ಪಡೆದು ಬದುಕನ್ನ ಬದಲಾಯಿಸಿಕೊಂಡರು. ವಿದ್ಯೆ ಎಟುಕದವರು ನಗರೀಕರಣದ ಪ್ರಯೋಜನವನ್ನು ಪಡೆದುಕೊಂಡು ವಿವಿಧ ವೃತ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬದುಕನ್ನು ಕಟ್ಟಿಕೊಂಡರು. ಬೆಳೆದ ಮಕ್ಕಳು ಹಿಡಿದ ಹೊಸ ಮಾರ್ಗ ಹಳೆಯ ತಲೆಮಾರಿನ ಜನರಿಗೆ ಅರಿವಾಗಿ ತಾವು ನಡೆಸಿಕೊಂಡು ಬರುತ್ತಿದ್ದ ಹಳೆಯ ಮಾರ್ಗವನ್ನು ಬದಲಾಯಿಸಿಕೊಂಡರು. ಮಕ್ಕಳ ಮುಂದೆ ಗೌರವದಿಂದ ಬದುಕಬೇಕೆಂಬುದನ್ನು ರೂಢಿಸಿಕೊಂಡು ತಮ್ಮ ಜಮೀನುಗಳಲ್ಲಿ ವ್ಯವಸಾಯವನ್ನು ಮಾಡಲು ಪ್ರಾರಂಭಿಸಿದರು. ಕೋಲಾರದ ಜನರನ್ನು ಕಾಪಾಡಿರುವ ಹೈನುಗಾರಿಕೆಯನ್ನು ತಾವೂ ರೂಢಿಸಿಕೊಂಡು ಹೊಸ ಬದುಕನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದರು.

ಮೇಲಿನ ನಿದರ್ಶನ ತಳ ಸಮುದಾಯಗಳ ಬದಲಾದ ಬದುಕಿಗೊಂದು ಉದಾಹರಣೆ ಮಾತ್ರ. ಶೋಷಣೆಯು ಪೂರ್ಣ ಪ್ರಮಾಣದಲ್ಲಿ ನಿಲ್ಲದೇ ಹೋದರು ತಮ್ಮ ಬದುಕಿನ ರೀತಿ ಬದಲಾಗಿರುವುದಂತೂ ನಿಜವೇ ಸರಿ. ಒಂದು ಹೊತ್ತಿನ ಊಟ ಹಾಗೂ ಮೈಮುಚ್ಚಿಕೊಳ್ಳುವ ಬಟ್ಟೆಗಳಿಗಾಗಿ ಇಡೀ ಜೀವನವನ್ನೇ ಜೀತಕ್ಕೆ ಅರ್ಪಿಸಿಕೊಂಡ ಕುಟುಂಬಗಳು ಇಂದು ಬದಲಾಗಿವೆ. ಬದಲಾಗಿ ಹೊಸ ಉರುಪಿನೊಂದಿಗೆ ಮುನ್ನುಗ್ಗುತ್ತಿವೆ. 'ನಿನ್ನ ಏಳಿಗೆಗೆ ನೀನೇ ಶಿಲ್ಪಿ' ಎಂಬ ಅಂಬೇಡ್ಕರರ ಮಾತು ಇಲ್ಲಿ ಸ್ಪಷ್ಟವಾಗುತ್ತದೆ. ಮತ್ತಿನ್ಯಾರೋ ಬಂದು ನನ್ನನ್ನು ಉದ್ಧರಿಸುತ್ತಾರೆ ಎಂಬ ಕಲ್ಪನೆಯಿಂದ ಹೊರಬಂದು ತಮಗೆ ತಾವೇ ಏಳಿಗೆಯನ್ನು ಹೊಂದಬೇಕಾಗಿರುವ ಅಗತ್ಯತೆ ಇದೆ. ಆ ದಾರಿಯಲ್ಲಿ ಇಂದಿನ ಜನ ನಡೆಯುತ್ತಿರುವುದು ಸ್ಥಿತ್ಯಂತರಗೊಂಡ ಸಮುದಾಯಕ್ಕೆ ಸಾಕ್ಷಿಯಾಗಿದೆ.

**ಸ್ತ್ರೀ ಶೋಷಣೆಯ ಚಿತ್ರಣ**

ಶೋಷಣೆ ಮನುಷ್ಯ ಜಗತ್ತಿನಲ್ಲಿ ವಿಭಿನ್ನ ನೆಲೆಗಳಲ್ಲಿ ಪರಿಚಯವಾಗುತ್ತಾ ಹೋಗುತ್ತದೆ. ಕೆಳಸಮುದಾಯಗಳ ಮೇಲೆ ನಡೆದಿರುವ, ನಡೆಯುತ್ತಿರುವ ಶೋಷಣೆಗಳು ಕಣ್ಣಿಗೆ ಕಾಣುವುದಾಗಿರುವುದರಿಂದ ಎಲ್ಲರು ಅದೊಂದೆ ಕೃತ್ಯವನ್ನು ಶೋಷಣೆ ಎಂದು ಬಿಂಬಿಸುತ್ತಾರೆ. ಆದರೆ ವರ್ಣಾಶ್ರಮ ಧರ್ಮದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಕಲ್ಪನೆಯನ್ನೂ ಮೀರಿ ಮುಂದುವರೆದದ್ದು ಪಂಚಮ ವರ್ಗ. ಇಡೀ ಇತಿಹಾಸವನ್ನು ಪರಿಶೀಲಿಸುತ್ತಾ ಹೋದರೆ ನಮಗೆ ಗೋಚರಿಸುವುದು ಈ ಎಲ್ಲ ವರ್ಗಗಳು ಕೇವಲ ಪುರುಷ ಕೇಂದ್ರಿತವಾದವು ಎಂದೆನಿಸುತ್ತದೆ. ಏಕೆಂದರೆ ಇಲ್ಲಿ ಸ್ತ್ರೀಯರಿಗೆ ಏಳಿಗೆಗೆ ಹೊಂದುವ ಅಂಶಗಳೇ ಕಾಣುವುದಿಲ್ಲ. ಸ್ತ್ರೀಯರು ಯಾವ ವರ್ಗದವರೇ ಆಗಿರಲಿ ಅವರನ್ನು ಮೇಲಿನ ಎಲ್ಲ ವರ್ಗಗಳಿಗಿಂತ ಕಡೆಯಾಗಿಯೇ ಕಾಣಲಾಗಿತ್ತು. ಒಂದು ಅವರನ್ನು ಅಡಿಗೆ ಮನೆಗೆ ಸೀಮಿತವಾಗಿರಿಸಲಾಗಿತ್ತು, ಜೊತೆಗೆ ಮಕ್ಕಳನ್ನು ಹಡೆಯುವ ಯಂತ್ರವನ್ನಾಗಿಸಲಾಗಿತ್ತು. ಅವರ ಮುಟ್ಟನ್ನ ಮೈಲಿಗೆಯನ್ನಾಗಿಸಿ ಮನೆಯಿಂದಲೇ ಹೊರಗಿರಿಸಲಾಗಿತ್ತೆಂದರೆ ಸ್ತ್ರೀಯರು ಮೇಲಿನ ಎಲ್ಲ ವರ್ಗಗಳಿಗಿಂತಲೂ ಕಡೆಯಾಗಿಯೇ ನೋಡಲ್ಪಟ್ಟ ವರ್ಗವಾಗಿತ್ತೆಂಬ ಸತ್ಯವನ್ನು ನಾವು ತಿಳಿಯಬಹುದು. ಸ್ತ್ರೀಯನ್ನು ಅಸಹಾಯಕಳನ್ನಾಗಿಸಿ, ಮಾನಸಿಕವಾಗಿ ಅವಳಲ್ಲಿ ಕೀಳರಿಮೆ ಮೂಡಿಸುವಂತೆ ಮಾಡಿ ಆಕೆಯನ್ನು ಪುರುಷ ತನ್ನ ಅಡಿಯಾಳನ್ನಾಗಿಸಿಕೊಂಡನು. ಆ ಪಾರಂಪರಿಕ ಗೌಪ್ಯ ಇಂದು ಗೌಪ್ಯವಾಗಿಯೇನೂ ಉಳಿದಿಲ್ಲ. ಸ್ತ್ರೀ ಹೊಸ ಉತ್ಸಾಹದಲ್ಲಿ ಹೊಸ ಶಕ್ತಿಯಾಗಿ ಹೊರಹೊಮ್ಮಿದ್ದಾಳೆ. ಹಾಗಂದ ಮಾತ್ರಕ್ಕೆ ಆಕೆಯ ಮೇಲಿನ ಶೋಷಣೆ ಪ್ರಮಾಣವೇನು ಕಡಿಮೆಯಾಗಿಲ್ಲ. ಶೋಷಣೆಯ ವಿರುದ್ಧ ಧನಿಯಾಗಿದ್ದಾಳೆ. ಜೊತೆಗೆ ಅಸಹಾಯಕ ಸ್ತ್ರೀ ಧ್ವನಿಗೆ ತಾನೆ ಸಹಾಯಕಳಾಗುತ್ತಿದ್ದಾಳೆ. ಮತ್ತೊಮ್ಮೆ ಅದೇ ಅಂಶವನ್ನು ನಾವು ಯೋಚಿಸುವುದಾದರೆ ಇಲ್ಲಿನ ಸ್ತ್ರೀಶಕ್ತಿಯ ಹಿಂದಿರುವ ಆತ್ಮ ಸ್ಥೈರ್ಯ 'ಶಿಕ್ಷಣ'.

'ಕಪಿಲ' ನಾಟಕದಲ್ಲಿ ನಾವು ಸ್ತ್ರೀ ಶೋಷಣೆಯ ವಿವಿಧ ಆಯಾಮಗಳನ್ನು ನೋಡಬಹುದಾಗಿದೆ. ಅರುಂಧತಿಯ ಪಾತ್ರವನ್ನು ಬಿಟ್ಟರೆ ಉಳಿದ ಎಲ್ಲ ಪಾತ್ರಗಳು ಅಸಹಾಯಕ ಪಾತ್ರಗಳಾಗಿಯೇ ಕಾಣಸಿಗುತ್ತವೆ. ಕಪಿಲನ ತಾಯಿ ಲಚ್ಚಿಯಾಗಲಿ, ತಾನು ಕೆಲಸ ಮಾಡುತ್ತಿದ್ದ ಮನೆಯ ಒಡತಿ ಪಾರ್ವತಿಯಾಗಿರಬಹುದು, ನೇರವಾಗಿ ಕಾಣದೇ ಹೋದರೂ ಲಚ್ಚಿ ಪರಿಚಯಿಸುವ ಪಕ್ಕದ ಊರಿನ ಸೊಣ್ಣಮ್ಮನ ಪಾತ್ರವಾಗಿರಬಹುದು ಇವೆಲ್ಲವೂ ಪುರುಷ ಪ್ರಧಾನ ಸಮಾಜದ ಕೈಯಲ್ಲಿ ವಿವಿಧ ರೀತಿಯಲ್ಲಿ ಶೋಷಣೆಗೆ ಒಳಗಾದ ಪಾತ್ರಗಳೇ ಆಗಿರುತ್ತವೆ. ಕಪಿಲನ ತಾಯಿ ದನಗಳನ್ನು ಸಂತೆಯಲ್ಲಿ ಮಾರಾಟಮಾಡುವಂತೆ ಮಾರಾಟವಾದ ಹೆಣ್ಣು. ಬಡತನ ಜೊತೆಗೆ ಅಸಹಾಯಕ ಬದುಕು ಆಕೆಯನ್ನು ಆ ಸ್ಥಿತಿಗೆ ತಲುಪಿಸುತ್ತದೆ. ಆಕೆಯನ್ನು ರಾಮಭಟ್ಟನು ಸಂತೆಯಲ್ಲಿ ಕೊಂಡು ತಂದಿರುತ್ತಾನೆ. ತನ್ನನ್ನು ಕೊಂಡು ತಂದನೆಂದು ಲಚ್ಚಿಗೆ ತನ್ನ ಒಡೆಯ ರಾಮಭಟ್ಟನ ಮೇಲೆ ಯಾವ ಅಸಹನೆಯೂ ಇರುವುದಿಲ್ಲ. ಬದಲಿಗೆ ತನಗೆ ಬದುಕು

ಕೊಟ್ಟನೆಂಬ ಕೃತಜ್ಞತೆಯ ಭಾವ ಮೂಡಿರುತ್ತದೆ. ಹಾಗಾಗಿ ಒಡೆಯನ ಯಾವ ಆಜ್ಞೆಯನ್ನು ಮೀರದೆ ಎಲ್ಲ ಕೆಲಸಗಳನ್ನು ಮಾಡುತ್ತಾಳೆ. ತಳ ಸಮುದಾಯದವಳು, ಆಕೆಯನ್ನು ಮುಟ್ಟಿದರೆ ಮೈಲಿಗೆಯಾಗುವುದೆಂದು ನಂಬಿಕೊಂಡಿದ್ದ ವರ್ಗದ ಹಿನ್ನೆಲಯವನಾಗಿದ್ದರೂ ಪ್ರಾಣಿ ಸಹಜವಾದ ಕಾಮತೃಷೆಗೆ ಒಳಗಾದ ರಾಮಭಟ್ಟ ಲಚ್ಚಿಯನ್ನು ಕೂಡಿರುತ್ತಾನೆ. ಫಲಿತವಾಗಿ ಒಂದು ಮಗುವಿಗೂ ಜನ್ಮನೀಡುತ್ತಾಳೆ. ಆದರೆ ಇದಾವುದು ಆಕೆಗೆ ತಪ್ಪೆಂದಾಗಲಿ ತನ್ನ ಬದುಕು ಹೀಗಾಯಿತಲ್ಲ ಇದಕ್ಕೆ ಕಾರಣವಾದ ಒಡೆಯನ ವಿರುದ್ಧ ತಿರುಗಿಬಿಳಬೇಕೆಂದಾಗಲಿ ಆಕೆಗೆ ಅನ್ನಿಸುವುದೇ ಇಲ್ಲ. ಬದಲಿಗೆ ಅತ್ಯಂತ ನಮ್ರವಾಗಿ ಮತ್ತಷ್ಟು ಖುಷಿಯಿಂದ ಕೆಲಸಮಾಡುತ್ತಾಳೆ. ವಿಪರ್ಯಾಸವೆಂದರೆ ಇದೆಲ್ಲವೂ ರಾಮಭಟ್ಟನ ಧರ್ಮಪತ್ನಿಗೆ ತಿಳಿದಿದ್ದರೂ ಮರುಮಾತನಾಡದೆ ಎಂದಿನಂತೆ ಸಂಸಾರ ನಡೆಸುತ್ತಾಳೆ. ಈ ಗುಟ್ಟು ಸಮಾಜಕ್ಕೂ ಬಿಚ್ಚಿಟ್ಟ ಬುತ್ತಿಯೇ ಆಗಿದ್ದರೂ ಯಾರೊಬ್ಬರೂ ಪ್ರಶ್ನಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಯಾಕೆಂದರೆ ಎಲ್ಲರೂ ಅದೇ ಮಾರ್ಗವನ್ನು ಅನುಸರಿಸುತ್ತಿದ್ದವರಾದ್ದರಿಂದ ಯಾರು ಯಾರನ್ನೂ ಪ್ರಶ್ನಿಸುವುದಾಗಲಿ, ನ್ಯಾಯವನ್ನು ಮಾತನಾಡುವುದಾಗಲಿ ಮಾಡುತ್ತಿರಲಿಲ್ಲ. ಧರ್ಮಕ್ಕೆ ಅಪಚಾರವಾದರೆ ಮಾತ್ರ ನ್ಯಾಯ ಪಂಚಾಯತಿಗಳು ನಡೆಯುತ್ತಿದ್ದವೇ ವಿನಃ ಈ ರೀತಿಯ ಶೋಷಣೆಗಳ ವಿರುದ್ಧ ಯಾರೊಬ್ಬರೂ ಧನಿ ಎತ್ತುತಿರಲಿಲ್ಲ. ಲಚ್ಚಿ ತಾನು ಯೌವನದಲ್ಲಿ ಇರುವವರೆಗೂ ಅಥವಾ ಕಪಿಲ ಪ್ರಯಕ್ಕೆ ಬರುವವರೆಗೂ ಒಡೆಯನಿಗೆ ಆಕೆಯ ಅಗತ್ಯತೆ ಇತ್ತು. ಒಂದು ಹಂತದಲ್ಲಿ ಅವನಿಗೆ ಆರ್ಥಿಕ ಸಮಸ್ಯೆ ಎದುರಾದಾಗ ಮತ್ತೆ ಲಚ್ಚಿಯನ್ನ ವ್ಯಾಪಾರಕ್ಕಿಟ್ಟು ಮತ್ತೊಬ್ಬರಿಗೆ ಮಾರುತ್ತಾನೆ. ಲಚ್ಚಿ ಮರು ಮಾತನಾಡದೆ ಒಡೆಯನ ಆಜ್ಞೆಯನ್ನು ಪಾಲಿಸುತ್ತಾಳೆ. ಆದರೆ ಆ ಸಂದರ್ಭದಲ್ಲಿ ತಾಯಿ ಹಾಗೂ ಮಗುವಿನ ನಡುವೆ ನಡೆಯುವ ಸಂಭಾಷಣೆ ಓದುಗರಲ್ಲಿ ಭಾವ ತೀವ್ರತೆಯನ್ನು ತರದೆ ಇರದು. ಕಪಿಲ ತಾನು ಇಷ್ಟ ಪಡುವ ಕರುವೊಂದನ್ನ ಮಾರಲಾಗಿದೆ ಎಂದು ತಿಳಿದು ಅಳುತ್ತಾ ಅದರೊಂದಿಗೆ ಮಾತನಾಡುತ್ತಿರುತ್ತಾನೆ. ಅಲ್ಲಿಗೆ ಬಂದ ತಾಯಿ ಅದರೊಟ್ಟಿಗೆ ತನ್ನನ್ನು ಮಾರಲಾಗಿದೆ ಎಂದು ಮಾತು ಬೆರೆಸುವಾಗ ಇದೆಂತ ಹೀನ ಸಂಸ್ಕೃತಿ ಎಂಬ ವಿಷಯ ಕಾಡದಿರದು. ಆದರೆ ಒಂದು ಕಾಲದಲ್ಲಿ ಈ ರೀತಿಯ ಶೋಷಣೆಯನ್ನು ಎದುರಿಸಿ ಅಧೀರರಾದವರು ಸ್ತ್ರೀ ಸಮುದಾಯದವರು.

ಪಾರ್ವತಿ ಪಾತ್ರದ ಹಿನ್ನೆಲೆಯ ಶೋಷಣೆ ಮತ್ತೊಂದು ರೂಪದ್ದು. ತನ್ನ ಗಂಡ ರಾಮಭಟ್ಟ ಸಮಾಜದ ಪ್ರತಿಷ್ಠಿತ ವ್ಯಕ್ತಗಳಲ್ಲಿ ಒಬ್ಬ. ಜೊತೆಗೆ ಎಲ್ಲ ಅನುಕೂಲಗಳಿದ್ದ ಸ್ಥಿತಿವಂತ ಮನೆತನ. ಆದರೆ ಆಕೆಗೆ ಇದ್ದ ಮಿತಿ ಮತ್ತೊಂದು ಸ್ತ್ರೀ ಶೋಷಣೆಯನ್ನು ಪರಿಚಯಿಸುವಂತಹದ್ದು. ಆಕೆಗೆ ಮನೆಯಿತ್ತು, ಗಂಡನಿದ್ದ, ಮಕ್ಕಳಿದ್ದರು, ಬಟ್ಟೆ, ಒಡವೆ ಎಲ್ಲವೂ ಇದ್ದವೂ ಆದರೆ ಆಲೋಚನೆಯ ಅಭಿವ್ಯಕ್ತಿಗೆ ಅವಕಾಶವೇ ಇದ್ದಿರಲಿಲ್ಲ. ರಾಮಭಟ್ಟನ ಅವಾಂತರದಿಂದ ವಿಷಯ ಅವನ ಕುತ್ತಿಗೆಗೆ ಬಂದಾಗ ಮತ್ತೆ ಗಂಡನ

ಪರವಾಗಿಯೇ ನಿಲ್ಲುವಳು ಆಕೆ. ಎಲ್ಲಿ ಗಂಡನನ್ನು ಕಳೆದುಕೊಳ್ಳಬೇಕಾಗುತ್ತದೋ ಎಂಬ ಭಯದಿಂದ. ಆದರೆ ಆಕೆಯ ಅಂತಃಕರಣ ಮತ್ತೇನನ್ನೋ ಯೋಚಿಸುತ್ತಿರುತ್ತದೆ. ಹಾಗಾಗಿಯೇ ಕಪಿಲನ ನಾಲಿಗೆಯನ್ನು ಸೀಳಿ ಕಿವಿಗೆ ಕಾದ ಸೀಸವನ್ನು ಸುರಿಸಿ ಅವನನ್ನು ಕೊಲ್ಲಲು ಮಾಡಿಕೊಂಡ ಯೋಚನೆ ಅವಳಿಗೆ ಸರಿ ಕಾಣುವುದಿಲ್ಲ. ಹಾಗಂತ ಯಾರಿಗೂ ಹೇಳಿಕೊಂಡರೂ ಆ ಮಾತಿಗೆ ಯಾವ ಬೆಲೆಯೂ ಇರುವುದಿಲ್ಲ. ಯೋಚಿಸಿದ ಆಕೆ ಕಪಿಲನ್ನು ಕಂಡ ತಕ್ಷಣ ಒಂದಷ್ಟು ಹಣ್ಣುಗಳನ್ನು ಅವನ ಕೈಗಿಟ್ಟು ಎಲ್ಲಿಗಾದರೂ ಓಡಿ ಹೋಗಿ ಬದುಕಿಕೊಳ್ಳುವಂತೆ ಸೂಚಿಸುತ್ತಾಳೆ. ತಾಯಿ ಹೃದಯವನ್ನ ನಾಟಕಕಾರರು ಅತ್ಯಂತ ಆಪ್ತವಾಗಿ ಚಿತ್ರಿಸಿದ್ದಾರೆ. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಅವನಂತೆ ಸೂಕ್ಷ್ಮ ಮತಿಯವರಾಗಲಿಲ್ಲವೆಂಬ ಕೊರಗೂ ಆಕೆಗೆ ಇರುತ್ತದೆ. ಆದರೂ ಆಕೆ ಸಮಾಧಾನ ಮಾಡಿಕೊಳ್ಳುವ ರೀತಿ ಆಪ್ತವಾಗುತ್ತದೆ. 'ನೀನು ನನ್ನ ಕುಡೀನೇ' ಎಂದು ಹೇಳುವಾಗ ಆಕೆಯ ಮಾತಿನಲ್ಲಿ ತನ್ನ ಗಂಡನ ಬದುಕೆಲ್ಲವೂ ನನಗೆ ತಿಳಿದಿದೆ ಆದರೆ ಏನೂ ಮಾಡಲಾಗದ ಅಸಹಾಯಕ ಬದುಕಾಗಿದೆ ಎಂಬ ಭಾವ ಸ್ಪಷ್ಟವಾಗಿ ಗೋಚರಿಸುತ್ತದೆ.

ಆದರೆ 'ಅರುಂಧತಿ' ಹಾಗೂ 'ಸೋಮು'ವಿನ ಹೆಂಡತಿ 'ಸುಜಾತ' ಈ ಹಿನ್ನೆಲೆಯಿಂದ ಸ್ವಲ್ಪ ದೂರವಾಗಿ ಕಾಣುತ್ತಾರೆ. ಹಾಗಿದ್ದರೂ 'ಕಪಿಲ'ನನ್ನು ಚಂದ್ರಸೇನ ಮಹಾರಾಜ ಶಿಕ್ಷಿಸಿದ ತರುವಾಯ ರಾಜಸೇವೆ ಮಾಡಿದ ರಾಜಪುರೋಹಿತ 'ಯಜ್ಞದತ್ತ'ನ ಮಗಳೆಂಬ ಕನಿಕರವೂ ಇಲ್ಲದೆ ಕಪಿಲನನ್ನು ಕೊಂದ ಬಳಿಕ ತನ್ನ ಅಂತಃಪುರದ ಸೇವೆಗಾಗಿ ಅರುಂಧತಿಯನ್ನು ನೇಮಿಸಿಕೊಳ್ಳುವ ಯೋಜನೆ ಹಾಕುತ್ತಾನೆ. ಇಲ್ಲಿ ನಾವು ಗಮನಿಸಬೇಕಾದ ವಿಚಾರ ಚಿಕ್ಕವರ ಕೈಗೆ ಸಿಕ್ಕ ಹೆಣ್ಣುಗಳ ಪಾಡು ಒಂದು ರೀತಿಯದ್ದಾದರೆ ದೊಡ್ಡವರ ಕಣ್ಣಿಗೆ ಬಿದ್ದ ಹೆಣ್ಣಿನ ಪಾಡು ಮತ್ತೊಂದು ಬಗೆಯದ್ದು. ಹೆತ್ತವರ ಹಾಗೂ ಕಟ್ಟಿಕೊಂಡವರ ಮುಂದೆಯೇ ಹೆಣ್ಣಿನ ಮೇಲೆ ನಡೆಯುತ್ತಿದ್ದ ಶೋಷಣೆ ನಾಚಿಕೆ ತರಿಸುವಂತದ್ದು. ರಾಮಾಯಣದ ಸೀತೆ ಹಾಗೂ ಮಹಾಭಾರತದ ದ್ರೌಪದಿಯ ಪಾತ್ರಗಳಂತೆ ಶೋಷಣೆಗಳು ಒಂದೊಂದು ಕಾಲಕ್ಕೆ ಒಂದೊಂದು ರೀತಿಯಾಗಿ ನಡೆಯುತ್ತಲೇ ಇದ್ದವು. ಆದರೆ ನಾಟಕ ಪಾತ್ರೋಚಿತವಾಗಿ ಸ್ತ್ರೀಯರ ಮೇಲಿನ ಶೋಷಣೆಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಚಿತ್ರಿಸಿರುವುದು ನಾಟಕದ ಬಹುದೊಡ್ಡ ಶಕ್ತಿಯಾಗಿ ಕಾಣುತ್ತದೆ.

**ಹುಟ್ಟಿಗೂ ವಿದ್ವತ್ತಿಗೂ ಇರುವ ನಂಟು**

ಶಿಕ್ಷಣ ಸಾಮಾಜಿಕ ಬದಲಾವಣೆಯ ಸಾಧಕ ಶಕ್ತಿ. ಶಿಕ್ಷಣದಿಂದ ಮಾತ್ರ ಬದಲಾವಣೆ ತರಲು ಸಾಧ್ಯ ಎಂಬುದನ್ನ ಹಲವು ಮಹನೀಯರು ಚಿಂತಿಸಿದ್ದರು ಹಾಗೂ ತಮ್ಮ ಕೃತಿಗಳಲ್ಲಿ ಆಗಿಂದಾಗ್ಗೆ ಸಮಾಜವನ್ನು ಎಚ್ಚರಿಸುತ್ತಾ ಬಂದಿದ್ದಾರೆ. ಶಿಕ್ಷಣ ಮನುಷ್ಯನ

ವಿವೇಚನೆಯನ್ನು ಬದುಕಿನ ರೀತಿಯನ್ನು, ಆಲೋಚನೆಯ ಕ್ರಮವನ್ನು ಚುರುಕುಗೊಳಿಸುತ್ತದೆ. ಇದಕ್ಕೆ ಸಾಕ್ಷಿಯೆಂಬಂತೆ ಇಂದಿನ ಸಮಾಜದ ಎಲ್ಲ ವರ್ಗದ ಜನರು ವಿದ್ಯೆಯಿಂದಾಗಿ ಬದುಕನ್ನ ಉನ್ನತೀಕರಿಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ದಾಸ್ಯಕ್ಕೆ ಒಳಗಾದ ತನ್ನ ಸಮಾಜವು ಶೋಷಿತರ ವಿರುದ್ಧ ತಿರುಗಿಬಿದ್ದಾಗ ಅಂಬೇಡ್ಕರ್ ತನ್ನವರಿಗೆ ಹೇಳಿತ ಮಾತುಗಳು ಇವೆ. ದಾಸ್ಯದಿಂದ ಮುಕ್ತರಾಗಬೇಕಾದರೆ ನಮಗೆ ಬೇಕಾಗಿರುವುದು ಶಿಕ್ಷಣ. ಆ ಹಿನ್ನೆಲೆಯಲ್ಲಿಯೇ ಅವರು ಮಂತ್ರದ ರೀತಿಯಲ್ಲಿ 'ಶಿಕ್ಷಣ, ಸಂಘಟನೆ ಹಾಗೂ ಹೋರಾಟ'ವನ್ನು ಉಪದೇಶದ ರೀತಿಯಲ್ಲಿ ಎಲ್ಲರಿಗೂ ತಿಳಿಸಿದರು. ಶಿಕ್ಷಣವಿಲ್ಲದ ಹೋರಾಟ ಒಂದು ಕಾಲಕ್ಕೆ ಅರ್ಥ ಕಳೆದುಕೊಳ್ಳುವ ಅಪಾಯವನ್ನು ಮುಂಚೆಯೇ ಗುರುತಿಸಿ ಅದರ ಮಹತ್ವನ್ನು ತಿಳಿಸಿಕೊಟ್ಟಿದ್ದಾರೆ.

ಇಂದಿಗೂ ಜನರ ವಿದ್ವತ್ತನ್ನ ಅವರ ಜನಾಂಗದ ಹಿನ್ನೆಲೆಯಲ್ಲಿ ಗುರುತಿಸುತ್ತಿರುವುದನ್ನು ನಾವು ನೋಡಬಹುದು. 'ಪರಿಚಿತ ಖಾಸಗಿ ಶಾಲೆಯ ಮಾಲಿಕರೊಬ್ಬರು ಯಾರಾದರು ಗಣಿತ ಶಿಕ್ಷಕರಿದ್ದರೆ ತಿಳಿಸಿ ಎಂದು ಕರೆ ಮಾಡಿ ಮನವಿ ಮಾಡಿಕೊಂಡರು. ಸರಿ, ಯಾರಾದರು ಇದ್ದರೆ ತಿಳಿಸುವುದಾಗಿ ಹೇಳಿದೆ. ಆದರೆ ಕರೆಯ ಕೊನೆಯಲ್ಲಿ ಅವರು ಹೇಳಿದ ಮಾತು ಆಶ್ಚರ್ಯವನ್ನು ನನ್ನಲ್ಲಿ ಉಳಿಸಿತು. ಅವರಂದದ್ದು "ಗಣಿತ ಶಿಕ್ಷಕರು ಬ್ರಾಹ್ಮಣರಾಗಿದ್ದರೆ ಒಳ್ಳೇದು". ಈ ಮಾತು ಕೇಳಿ ಏನು ಉತ್ತರಿಸಬೇಕೋ ತಿಳಿಯದೆ ಸುಮ್ಮನಾದೆ. ಆನಂತರ ಆ ವಿಚಾರ ನನ್ನನ್ನ ಬಹುವಾಗಿ ಕಾಡಿದ್ದಿದೆ. ಪಾಠ ಮಾಡಲು ಬೇಕಾಗಿರುವುದು ಒಳ್ಳೆಯ ವಿದ್ವತ್ತಿರುವ ತರಬೇತಿ ಹೊಂದಿದ ಶಿಕ್ಷಕ. ಆದರೆ ನಮ್ಮ ಸಮಾಜ ಇಂದಿಗೂ ಜಾತಿಗಳ ಆಧಾರದ ಮೇಲೆ ಶಿಕ್ಷಕರನ್ನ ಆಪೇಕ್ಷಿಸುತ್ತಿದಿಯಲ್ಲ ಎಂಬ ಅಂಶ ಅರಗಿಸಿಕೊಳ್ಳಲು ಕಷ್ಟವಾದದ್ದು. ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿ ಶತಮಾನಗಳನ್ನೆ ಉನ್ನತ ವರ್ಗಗಳ ಸೇವೆಯಲ್ಲಿ ಕಳೆದಿರುವ ಹಲವು ಕುಟುಂಬಗಳನ್ನು ನಾವು ನೋಡುತ್ತಿದ್ದೇವೆ. ಹಲವು ಮಹನೀಯರ ಹೋರಾಟದ ಫಲವಾಗಿ ಇಂದು ಸರ್ವರೂ ಶಿಕ್ಷಣ ಸಿಗುವಂತಾಗಿದೆ. ಆದರೂ ಮತ್ತದೇ ಸಾಮಾಜಿಕ ಶೋಷಣೆಯ ಸಣ್ಣ ಸುಳಿವು ಇಂತಹ ಘಟನೆಗಳಿಂದಾಗಿ ಸಮಾಜ ಮತ್ತೆ ಯಾವ ಹಾದಿಯಲ್ಲಿ ಸಾಗುತ್ತಿದೆ ಎಂಬ ಆತಂಕ ಮೂಡುತ್ತದೆ.

'ಕಪಿಲ' ನಾಟಕದಲ್ಲಿ ಈ ರೀತಿಯಾದ ಸಾಮಾಜಿಕ ಅಸಮಾನತೆಯ ಚಹರೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅಭ್ಯಾಸ ಹಾಗೂ ಆಸಕ್ತಯ ಪರಿಣಾಮವಾಗಿ ಕಪಿಲ ಸುನಾಯಾಸವಾಗಿ ವಿದ್ವತ್ತನ್ನು ಮೈಗೂಡಿಸಿಕೊಳ್ಳುತ್ತಾನೆ. ಇದನ್ನು ಕೇಳಿದ ತಾಯಿ 'ಲಚ್ಚಿ'ಗೆ ಅಪಾರ ಆನಂದವಾಗುತ್ತದೆ. ಆದರೆ ಆನಂದದ ಜೊತೆಗೆ ಆತಂಕವಾಗುವುದಿದೆ ನೋಡಿ ಅದು ನಮ್ಮ ಸಮಾಜದ ಅಸಲಿ ಮುಖವನ್ನು

ಪರಿಚಯಿಸುತ್ತದೆ. ಕಪಿಲ ಅತ್ಯಂತ ಮುಗ್ಧನಾಗಿ "ನಾನು ಕಲಿತದ್ದು ನಿನಗೆ ಇಷ್ಟವಿಲ್ಲೇನಮ್ಮ" ಎಂದು ಕೇಳುವಾಗ ಲಚ್ಚಿ ತನ್ನ ಮಗ ಕಲಿಯುವುದು ತನಗೆ ಎಷ್ಟು ಇಷ್ಟವೆಂಬುದನ್ನು ತಿಳಿಸುತ್ತಾಳೆ. ಆದರೆ ಹಾಗೆ ಕಲಿತದ್ದು ಯಾರ ಕಿವಿಗಾದರು ಬಿದ್ದರೆ ಅವರ ನಾಲಿಗೆ ಸೀಳಿಸಿ, ಕಿವಿಗೆ ಕಾದ ಸೀಸವನ್ನು ಸುರಿದು ಕೊಲ್ಲಲಾಗುವುದು ಎಂಬ ಮಾಹಿತಿಯನ್ನು ನೆನಪಿಸಿಕೊಳ್ಳುತ್ತಾಳೆ. ಅವನ ದುರಾದೃಷ್ಟವೋ ಏನೋ ತನ್ನ ತಾಯಿ ದೂರದ ಕೆಲವು ದಿನಗಳಲ್ಲಿ ಬ್ರಾಹ್ಮಣ ವಟುಗಳು ವೇದಾಭ್ಯಾಸ ಮಾಡುತ್ತಿದ್ದಾಗ ಆ ಹುಡುಗರು ಮಾಡುತ್ತಿದ್ದ ತಪ್ಪುಗಳನ್ನು ತಿದ್ದಿ ಹೇಳಿಬಿಡುತ್ತಾನೆ. ಇದನ್ನು ಕೇಳಿದ ಅವರು ಇವನು ಆಳುಮಗಳ ಮಗ ಅವನಿಗೆ ಇಷ್ಟು ವಿದ್ಯೆ ಹೇಗೆ ಬರಲು ಸಾಧ್ಯವೆಂದು, ಅವನ ವಿದ್ವತ್ತಿಗೆ ರಾಮಭಟ್ಟರೇ ಕಾರಣವೆಂದು ಪಂಚಾಯಿತಿಗೆ ತಂದಬಿಡುತ್ತಾರೆ. ಆದರೆ, ತನ್ನ ಕುಲದ ಗೌರವ ಕಾಪಾಡಲು ರಾಮಭಟ್ಟನನ್ನು ಕಾಪಾಡಲು ನಾರಾಯಣಭಟ್ಟ ಅವನ ಮನೆಗೆ ಬಂದು ಅವನಿಂದಾದ ಅನಾಹುತವನ್ನು ಹೇಳಿ ಶಿಕ್ಷೆಯ ರೂಪವನ್ನು ತಿಳಿಸುತ್ತಾನೆ. ರಾಮಭಟ್ಟ ರಹಸ್ಯ ಸಭೆಯನ್ನು ಸೇರಿ ತಾನು ತಪ್ಪಿಸಿಕೊಂಡು ಅಸಹಾಯಕನಾದ ಕಪಿಲನನ್ನು ಬಲಿಕೊಡಲು ಒಪ್ಪಿಕೊಳ್ಳುತ್ತಾನೆ. ಇಲ್ಲಿ ಏಕಲವ್ಯನಂತೆ ತನ್ನ ಅಭ್ಯಾಸ ಫಲವಾಗಿ ಕಲಿತ ವಿದ್ಯೆಯಿಂದಾಗಿ ಕಪಿಲ ಶಿಕ್ಷೆಗೆ ಸಿದ್ಧವಾಗಬೇಕಾಗುತ್ತದೆ. ಆದರೆ ರಾಮಭಟ್ಟನೇ ಅವನ ಹುಟ್ಟಿಗೆ ಹಾಗೂ ವಿದ್ಯೆಗೆ ಕಾರಣವಾಗಿದ್ದರೂ ಅವನನ್ನು ರಕ್ಷಿಸುವ ಹುನ್ನಾರ ನಡೆದಿರುತ್ತದೆ.

ತಾನು ಕಲಿತ ವಿದ್ಯೆ 'ಕಪಿಲ'ನಿಗೆ ಒಂದೊಳ್ಳೆ ವ್ಯಕ್ತಿತ್ವವನ್ನು ರೂಪಿಸಿರುತ್ತದೆ. ಹಾಗಾಗಿ ಶಿಕ್ಷೆಯ ಕ್ರೂರತೆಯನ್ನು ಅರಿತ ರಾಮಭಟ್ಟನ ಮಡದಿ ಪಾರ್ವತಿ ಕಪಿಲನಿಗೆ ತಾಯಿಯ ರೀತಿಯ ಪ್ರೀತಿಯನ್ನು ತೋರಿಸಿ ಎಲ್ಲಾದರೂ ದೂರ ಹೋಗಿ ಬದುಕಿಕೊಳ್ಳಲು ಸೂಚಿಸುತ್ತಾಳೆ. ಮಾರ್ಗಮಧ್ಯದಲ್ಲಿ ಸೋಮನ ಪರಿಚಯವಾಗುತ್ತದೆ. ಜೊತೆಗೆ ಸೋಮನೂ ಕೂಡ ಇವನ ವಿದ್ವತ್ತಿಗೆ ಹಾಗೂ ವ್ಯಕ್ತತ್ವಕ್ಕೆ ಸೋತು ಅವನನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಕಪಿಲನ ಪೂರ್ವಪರಗಳ ಅರಿವಿದ್ದರೂ ತನ್ನ ತಂದೆ ಯಜ್ಞದತ್ತರಿಗೆ ಪರಿಚಯಿಸಿ ಅವರ ಶಿಷ್ಯನಾಗುವ ಅವಕಾಶವನ್ನೂ ಕಲ್ಪಿಸುತ್ತಾನೆ. ತನ್ನ ಮಾತು ಹಾಗೂ ಚಿಂತನೆಗಳು ಅವನಿಗೆ ವಿದ್ಯೆಯಿಂದ ಒಲಿದ ವರಗಳು. ಆ ವರಗಳು ಕಪಿಲನನ್ನು ರಾಜಪುರೋಹಿತನ ಜಾಗದವರೆಗೂ ಕೊಂಡೊಯ್ಯುತ್ತವೆ. ಜೊತೆಗೆ ಅರುಂಧತಿಯಂತಹ ಪರಮಪಂಡಿತರ ಮಗಳು ಅವನನ್ನು ವರಿಸಲು ಸಿದ್ಧವಾಗುತ್ತಾಳೆ. ಅಲ್ಲಿಯೂ ಅವನ ಹಿನ್ನೆಲೆಯನ್ನು ತಿಳಿಸಿ ತಾನೂ ಆಕೆಗೆ ಅರ್ಹ ವರನ್ನಲ್ಲವೆನ್ನುವ ವಾಸ್ತವಾಂಶವನ್ನು ತಿಳಿಸಲು ಪ್ರಯತ್ನಿಸುತ್ತಾನೆ. ಆದರೆ ಸುಶಿಕ್ಷಿತರಾಗಿದ್ದ ಯಜ್ಞದತ್ತರ ಕುಟುಂಬದಲ್ಲಿ ಬೆಳೆದ ಅರುಂಧತಿಗೆ ಇವ್ಯಾವ ಅಂಶಗಳೂ ಕಪಿಲನ ವಿದ್ವತ್ತಿನ ಮುಂದೆ ವಿಶೇಷವಾಗಿ ಕಾಣುವುದಿಲ್ಲ. ಹಾಗಾಗಿ ಆಕೆ ಕಪಿಲನನ್ನು ವಿವಾಹವಾಗಲು ಸಿದ್ಧವಾಗುತ್ತಾಳೆ. ಇದಕ್ಕೆ ಆಕೆಯ ಅಣ್ಣ ಹಾಗೂ ತಂದೆ ಸಮ್ಮತಿಯನ್ನು ಸೂಚಿಸುತ್ತಾರೆ. ಇಲ್ಲಿ ಒಂದು ಸುಶಿಕ್ಷಿತ

ಕುಟುಂಬದ ಪ್ರಬುದ್ಧ ಮನಸ್ಥಿತಿಯನ್ನು ತಿಳಿಯುವಂತಾಗುತ್ತದೆ. 'ಕಪಿಲ'ನಂತಹ ಹುಡುಗ ತಾನು ಹುಟ್ಟಿನಿಂದ ಆಳುಮಗಳ ಮಗನಾಗಿದ್ದರೂ ಹುಟ್ಟಿಗೂ ತಾನು ಗಳಿಸಿಕೊಂಡ ವಿದ್ವತ್ತಿಗೂ ಸಂಬಂಧವೇ ಇಲ್ಲವೆನ್ನುವ ಹಾಗೆ ಶಿಕ್ಷಣವನ್ನು ಪಡೆಯುತ್ತಾನೆ. ಇತರೆ ಯಾವುದೇ ಪಂಡಿತರಿಗೂ ಕಡಿಮೆಯಲ್ಲವೆನ್ನುವುದನ್ನು ಸಾಬೀತುಪಡಿಸಿ ತೋರಿಸುತ್ತದೆ 'ಕಪಿಲ'ನ ಪಾತ್ರ. 'ವಿದ್ಯೆ ಸಾಧಕರ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ' ಎಂಬ ಮಾತು ಅತ್ಯಂತ ಆಪ್ತವಾಗಿ ಈ ನಾಟಕಕ್ಕೆ ಹೊಂದುತ್ತದೆ.

**ಶೋಷಣೆಯಲ್ಲಿಯೂ ಚಿತ್ರಿತಗೊಂಡಿರುವ ಮಾನವೀಯತೆ**

ಹಾಗಾದರೆ, ಸಮಾಜದಲ್ಲಿ ಕೇವಲ ಶೋಷಣೆಯೊಂದೆ ಮನೆಮಾಡಿದಿಯೇ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಖಂಡಿತ ಇಲ್ಲ. ಯಾಕೆಂದರೆ ಶೋಷಣೆಯೇ ಸಮಾಜವಾಗಿದ್ದರೆ ಆ ಸಮಾಜ ರಕ್ತಪಾತದಲ್ಲಿ ಕೊನೆಯಾಗುತ್ತದೆ. ಇದಕ್ಕೆ ಇತಿಹಾಸ ಹಲವು ಉದಾಹರಣೆಗಳನ್ನು ಕೊಡುತ್ತದೆ. ಮತ್ತೆ ಯಾಕೆ ನಾವು ಹೆಚ್ಚಿನ ಮಹತ್ವವನ್ನು ಶೋಷಣೆಯ ಬಗೆಗಿನ ಮಾಹಿತಿಗಳಿಗೆ ನೀಡುತ್ತಿದ್ದೇವೆ? ಎಂಬ ಪ್ರಶ್ನೆ ಬಂದಾಗ ಒಂದು ಆರೋಗ್ಯಕರವಾದ ಸಮಾಜದಲ್ಲಿ ಶೋಷಣೆ ಎಂಬುದು ಸಮಾಜ ಘಾತುಕ ಕೆಲಸ. ಆರೋಗ್ಯಕರ ಸಮಾಜಕ್ಕೆ ಇದು ಎಂದಿಗೂ ಮಾರಕವೇ ಸರಿ. ಹಾಗಾಗಿ ಸಣ್ಣ ಪ್ರಮಾಣದ ಶೋಷಣೆಯನ್ನೂ ನಾವು ವಿರೋಧಿಸುವ ಅಗತ್ಯವಿದೆ.

'ಕಪಿಲ' ನಾಟಕವು ಸಮಾಜದಲ್ಲಿ ಆಚರಣೆಯಲ್ಲಿದ್ದ ಹಲವು ಅಮಾನವೀಯ ಶೋಷಣೆಗಳನ್ನು ಓದುಗರಿಗೆ ಪರಿಚಯಿಸುತ್ತದೆ. ಮನುಷ್ಯರನ್ನು ಇತರೆ ಪ್ರಾಣಿಗಳ ಹಾಗೆ ವ್ಯಾಪಾರ ಮಾಡುವುದಾಗಿರಲಿ, ಹೆಣ್ಣನ್ನು ದಾಸ್ಯಕ್ಕೆ ಒಳಪಡಿಸಿಕೊಂಡು ಆಕೆಯ ಮೇಲೆ ನಡೆಸುವ ದೈಹಿಕ ಹಾಗೂ ಮಾನಸಿಕ ಶೋಷಣೆಗಳ ಚಿತ್ರಣ, ಹೆಣ್ತನವನ್ನೆ ಜೀತದ ನೆರಳಲ್ಲಿ ಕಮರುವ ಹಾಗೆ ಮಾಡುವ ವಿಚಾರ, ಬಾಲ ಕಾರ್ಮಿಕ ಪದ್ಧತಿ, ಜೀತ ಪದ್ಧತಿ ಹೀಗೆ ಹಲವು ಶೋಷಣೆಯ ಮುಖಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಮೇಲೆ ಚರ್ಚಿಸಿರುವ ಹಾಗೆ ಇಡೀ ನಾಟಕ ಹೇಗೆ ಸಮಾಜದ ಕರಾಳ ಮುಖಗಳನ್ನು ಪರಿಚಯಿಸುತ್ತದೆಯೋ ಹಾಗೆ ನಾಟಕದಲ್ಲಿ ಶೋಷಣೆಯ ವಿರುದ್ಧ ಧ್ವನಿಯಾಗಲು ಅದೇ ಸಮಾಜ ನಮಗೆ ಶಕ್ತಿಯನ್ನು ನೀಡುತ್ತದೆ. ಹನ್ನೆರಡನೇ ಶತಮಾನದ ಬಸವಣ್ಣನಾದಿಯಾಗಿ ಸಾಮಾಜಿಕ ಶೋಷಣೆಯ ಚಿತ್ರಣವನ್ನು ಬದಲಿಸುವ ಕೆಲಸವನ್ನು ಹಲವರು ಮಾಡಿಕೊಂಡು ಬಂದಿದ್ದಾರೆ. ಆ ಹಿನ್ನಲೆಯಲ್ಲಿಯೇ ಇಲ್ಲಿ ಬರುವ ಯಜ್ಞದತ್ತರ ಕುಟುಂಬ ಓದುಗರ ಮನಸನ್ನು ಗೆಲ್ಲುತ್ತದೆ. ರಾಮಭಟ್ಟನ ಜಾತಿಗೇ ಸೇರಿದ್ದರೂ ಅವನಲ್ಲಿರುವಂತೆ ಯಾವ ಕೆಟ್ಟ ಚಿಂತನೆಯಾಗಲಿ, ಬುದ್ಧಿಯಾಗಲಿ ಇವರ ಕುಟುಂಬಕ್ಕೆ ಇರುವುದಿಲ್ಲ. ವಿಶಾಲ ಮನಸ್ಸಿನ ಯಜ್ಞದತ್ತರು ಕಪಿಲನ ಜ್ಞಾನವನ್ನು

ಪರೀಕ್ಷಿಸುತ್ತಾರೆಯೇ ಹೊರತು ಅವನ ಕುಲವನ್ನು ಕೇಳುವುದಿಲ್ಲ. ತನ್ನ ಮಗಳನ್ನು ವಿವಾಹ ಮಾಡಿಕೊಡುವಾಗಲು ಆ ವಿಚಾರವಾಗಿ ಚಿಂತಿಸದೆ ಮಕ್ಕಳ ಸಂತೋಷವೇ ತನ್ನ ಬದುಕೆಂದು ಪ್ರಬುದ್ಧ ವೈಚಾರಿಕತೆಯನ್ನು ಪ್ರದರ್ಶಿಸುತ್ತಾರೆ. ಸಮಾಜದ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ಶೋಷಣೆ ಮಾಡುತ್ತಿದ್ದ ಜನಾಂಗದಿಂದಲೇ ಬಂದು ವಿರೋಧಿಸುವುದು ಅತ್ಯಂತ ಶ್ರೇಷ್ಠ ಕೆಲಸ. ಬಸವಣ್ಣ ವಿಶೇಷವಾಗಿ ಕಾಣುವುದು ಈ ಹಿನ್ನೆಲೆಯಲ್ಲಿಯೇ. ಆ ಸಾಲಿಗೆ ಯಜ್ಞದತ್ತರ ಕುಟುಂಬವೂ ಸೇರಿಕೊಳ್ಳುತ್ತದೆ.

**ಅಧಿಕಾರದ ದುರ್ಬಳಕೆ**

ಒಂದು ಸಾಹಿತ್ಯದ ಕೃತಿ ಓದುಗ ಸಮುದಾಯಕ್ಕೆ ಯಾವೆಲ್ಲ ಅಂಶಗಳನ್ನು ಪರಿಚಯಿಸುತ್ತದೆ ಎಂಬುದು ಅತ್ಯಂತ ಕುತೂಹಲ ಹಾಗೂ ಆಶ್ಚರ್ಯದ ಸಂಗತಿ. ಓದುತ್ತಾ ನಮ್ಮ ಸಮಾಜದ ಜೊತೆಗೆ ನಮ್ಮನ್ನು ಮುಖಾಮುಖಿಯನ್ನಾಗಿಸಿ ಬಿಡುತ್ತದೆ. ಇಂದು ನಮ್ಮ ಸಮಾಜದಲ್ಲಿ ಪ್ರತಿ ಹಂತದಲ್ಲಿಯೂ ಕಾಣುತ್ತಿರುವುದು ಅಧಿಕಾರದ ದುರ್ಬಳಕೆ. ತನ್ನ ಅಧಿಕಾರದ ಅವಧಿಯಲ್ಲಿ ತನಗಾಗಿ, ತನ್ನವರಿಗಾಗಿ ಮಾಡಿಕೊಳ್ಳುವ ಅನುಕೂಲಗಳಿಂದಾಗಿ ಸಮಾಜಕ್ಕೆ ಆಗುತ್ತಿರುವ ನಷ್ಟವನ್ನು ಯಾರೊಬ್ಬರೂ ತುಂಬಿಕೊಡುವುದಿಲ್ಲ. ಅದು ಆರ್ಥಿಕವಾಗಿ ಆಗಿರಬಹುದು, ಆಡಳಿತಾತ್ಮಕವಾಗಿ ಆಗಬಹುದು. ಈ ರೀತಿಯ ಸ್ವಪ್ರತಿಷ್ಠೆಯ ಮೋಜಿಗೆ ಅಧಿಕಾರಕ್ಕೆ ಬರುವವರಿಂದ ಯಾವುದೇ ರೀತಿಯ ಅನುಕೂಲಗಳನ್ನು ಸಮಾಜ ಪಡೆಯಲು ಸಾಧ್ಯವಾಗುವುದಿಲ್ಲ.

ನಾಟಕದಲ್ಲಿ ಬರುವ ಚಂದ್ರಸೇನ ಮಹಾರಾಜ ಅವಕಾಶ ಸಿಕ್ಕಾಗ ಅಧಿಕಾರವನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಾನೆಂದು ತಿಳಿಯಬಹುದು. ನ್ಯಾಯ ಒದಗಿಸುವುದಾಗಿ ಭರವಸೆಯನ್ನು ನೀಡಿ ತನ್ನದೇ ಆಸ್ಥಾನದಲ್ಲಿ ಸೇವೆ ಸಲ್ಲಿಸಿದ ಕಪಿಲನ ಕುರಿತಾಗಿ ತಿಳಿದಿದ್ದರೂ ಅರುಂಧತಿಯ ಮೇಲಿನ ಮೋಜು ಅವನನ್ನು ಅಧಿಕಾರದ ದುರ್ಬಳಕೆ ಮಾಡಿಕೊಳ್ಳಲು ಪ್ರೋತ್ಸಹಿಸುತ್ತದೆ. ರಾಜರ ಆಳ್ವಿಕೆಯ ಕಾಲಕ್ಕೆ ರಾಜನ ಹುಚ್ಚಿಗೆ ಪ್ರಜೆಗಳು ಕುಣಿಯಬೇಕಾಗಿತ್ತು. ಪ್ರಜಾಪ್ರಭುತ್ವದ ಈ ಕಾಲದಲ್ಲಿಯೇ ನಾವು ಅಧಿಕಾರಶಾಹಿಗಳ ದರ್ಪಗಳನ್ನು ನೋಡುತ್ತಿದ್ದೇವೆ. ಇನ್ನು ರಾಜರ ಆಳ್ವಿಕೆಯನ್ನು ಕೇಳುವ ಹಾಗೆಯೇ ಇರಲಿಲ್ಲ.

ನಾಟಕದ ಆರಂಭದಲ್ಲಿ ಬರುವ ನಾರಾಯಣನ ಪಾತ್ರವೂ ಅದೇ. ಆ ಅಗ್ರಹಾರದ ಪ್ರಧಾನನಾಗಿ ಎಲ್ಲರಿಗೂ ನ್ಯಾಯ ಕೊಡಿಸಬೇಕಾದವನು ರಾಮಭಟ್ಟನನ್ನು ಕಾಪಾಡಲು ಮಸಲತ್ತನ್ನು ನಡೆಸುತಾನೆ. ರಾಮಭಟ್ಟ ನು ಹಿರಿಯ ಬ್ರಾಹ್ಮಣನೆಂಬ ಸಲುಗೆಯಿಂದ

ರಾಜನಲ್ಲಿಗೆ ಹೋಗಿ ಕಪಿಲನ ಮೇಲೆ ಚಾಡಿ ಹೇಳುತ್ತಾನೆ. ಇವೆಲ್ಲವೂ ತಮಗಿರುವ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವುದೇ ಆಗಿದೆ.

## ಗ್ರಂಥ ಋಣ:


1. ಸಿ. ವೀರಣ್ಣ. "ಕಪಿಲ." ಸುಮುಖ ಪ್ರಕಾಶನ ಬೆಂಗಳೂರು.
2. ಕುವೆಂಪು. "ಶೂದ್ರತಪಸ್ವಿ. ಉದಯರವಿ ಪ್ರಕಾಶನ, 2012.
3. ಸಿ. ವೀರಣ್ಣನವರ ಸಂದರ್ಶನ. 26th September 2014.

   http://napskannada.blogspot.com/2014/09/cveeranna.html
4. ಸಿ. ವೀರಣ್ಣನವರ ಪುಸ್ತಕಗಳು 26th September 2014.

   https://www.sapnaonline.com/shop/author/veeranna-c